*ಯಾದಗಿರಿ * ಕಲಬುರಗಿ * ರಾಯಚೂರು * ಕೊಪ್ಪಳ * ಬಳ್ಳಾರಿ * ಬೀದರ್ * ವಿಜಯನಗರ

ಕನ್ನಡ ದಿನಪತ್ರಿಕೆ

# ಆರಾಧ್ಯ ವಾಣಿ

ARADHYAVANI

ಸತ್ಯ, ನಿಷ್ಠೆ, ವಿಶ್ವಾಸದ ಪ್ರತೀಕ...



ಸಂಪಾದಕರು: ಕ್ಷೀರಲಿಂಗಯ್ಯ ಹಿರೇಮಠ ಬೋನ್ಹಾಳ

ಸೋಮವಾರ 20–04–2026 | ಸಂಪುಟ 01 | ಸಂಚಿಕೆ 01 | RNI No. KNKAN/26/A2481 | ಪುಟ 4 | ರೂ. 2 /– | PHONE : 9036522727

Monday 20-04-2026 | VOLUME: 01 | ISSUE: 01 | RNI NO : KNKAN/26/A2481 | PAGE: 04 | PRECE : 02/- | PHONE : 9036522727

# ದೈವಭಕ್ತಿ–ದೇಶಭಕ್ತಿ ಜೀವನದ ದಾರಿದೀಪ


## ರುಕ್ಮಾಪುರದಲ್ಲಿ ಪ್ರಾಣ ಪ್ರತಿಷ್ಠಾಪನೆ, ಧರ್ಮಸಭೆ, ಸಾಮೂಹಿಕ ವಿವಾಹ ಮಹೋತ್ಸವ | ಶ್ರೀಶೈಲ ಜಗದ್ಗುರುಗಳ ಆಶೀರ್ವಚನ

**ಆರಾಧ್ಯ ವಾಣಿ**

ಸುರಪುರ : ತಾಲೂಕಿನ ರುಕ್ಮಾಪುರ ಗ್ರಾಮದಲ್ಲಿ ಶ್ರೀ ಬನಶಂಕರಿ ದೇವಸ್ಥಾನದ ಆವರಣದಲ್ಲಿ ಭಾನುವಾರ ನಡೆದ ಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ, ಧರ್ಮಸಭೆ ಹಾಗೂ ಸಾಮೂಹಿಕ ವಿವಾಹ ಮಹೋತ್ಸವ ಧಾರ್ಮಿಕ ವೈಭವದ ನಡುವೆ ನೆರವೇರಿತು. ಶ್ರೀಶೈಲ ಜಗದ್ಗುರು ಪಂಡಿತರಾಧ್ಯ ಡಾ. ಚನ್ನಸಿದ್ಧರಾಮ ಶಿವಾಚಾರ್ಯ ಭಗವತ್ಪಾದಂಗಳವರು ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಗದ್ಗುರುಗಳು, "ದೈವಭಕ್ತಿ ಮತ್ತು ದೇಶಭಕ್ತಿ ಜೀವನದ ದಾರಿದೀಪವಾಗಬೇಕು. ದೇಹಾಭಿಮಾನಕ್ಕಿಂತ ದೇಶಾಭಿಮಾನ, ಧನಾಭಿಮಾನಕ್ಕಿಂತ ಧರ್ಮಾಭಿಮಾನ ಬೆಳೆಸಿಕೊಂಡಾಗ ಜೀವನ ಸಾರ್ಥಕವಾಗುತ್ತದೆ" ಎಂದು ಹೇಳಿದರು. ಧರ್ಮ ಮಾನವನಿಗೆ ಪ್ರೀತಿ, ವಿಶ್ವಾಸ ಮತ್ತು ಸಹಕಾರದ ಮೌಲ್ಯಗಳನ್ನು ಕಲಿಸುತ್ತದೆ ಎಂಬ ಸಂದೇಶವನ್ನು ಅವರು ನೀಡಿದರು

ದೇವಾಲಯಗಳು ಭಾರತ ದೇಶದ ಸಾಂಸ್ಕೃತಿಕ ಪರಂಪರೆಯ ಜೀವಾಳವಾಗಿದ್ದು, ಪ್ರಾಚೀನ ಕಾಲದಿಂದಲೂ ಸಂಸ್ಕೃತಿ ಮತ್ತು ಧರ್ಮವನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಭಗವಂತ ಎಲ್ಲೆಡೆ ಇರುವನು, ದೇವಸ್ಥಾನದಲ್ಲಿನ ಮೂರ್ತಿಗಳ ಮೂಲಕ ಪ್ರಕಟವಾಗುತ್ತಾನೆ. ಭಕ್ತಿಯಿಂದ ಪೂಜಿಸಿದರೆ ಉತ್ತಮ ಫಲ ದೊರೆಯುತ್ತದೆ





ಎಂದು ಜಗದ್ಗುರುಗಳು ತಿಳಿಸಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಸುರಪುರ ಸಂಸ್ಥಾನದ ಅರಸರ ಕೊಡುಗೆಯನ್ನು ಸ್ಮರಿಸಿದ ಅವರು, ದೇಶಾಭಿಮಾನವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಶಾಸಕ ರಾಜಾ ವೇಣುಗೋಪಾಲ ನಾಯಕ ಮಾತನಾಡಿ, ರುಕ್ಮಾಪುರ ಗ್ರಾಮದಲ್ಲಿ ನಡೆದ ಈ ಮಹೋತ್ಸವ ಗ್ರಾಮದ ಹೆಮ್ಮೆ ಹೆಚ್ಚಿಸಿದೆ. ಪಾಲಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ದೇವರಭೂಪುರದ ಅಭಿನವ ಗಜದಂಡ ಶಿವಾಚಾರ್ಯರು ಮಾತನಾಡಿ, ಶ್ರೀ ಬನಶಂಕರಿ ದೇವಿಯ ಕೃಪೆಯಿಂದ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿವೆ ಎಂದರು. ಉತ್ತರ ಪ್ರದೇಶದ ಮಥುರಾ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ಮಹಾದೇವಪ್ಪ ಚೆಟ್ಟಿ ಹಾಗೂ ಉದ್ಯಮಿ ಕಿಶೋರಚಂದ ಜೈನ್ ಸಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಸಂದರ್ಭದಲ್ಲಿ ಒರ್ವ ಜೋಡಿಯ ಸಾಮೂಹಿಕ ವಿವಾಹ ನೆರವೇರಿತು. ವಿಶ್ವನಾಥ ಚಟ್ಟಿ, ಬಸವರಾಜ ಬಡಗಾ, ಸಂಗನಗೌಡ ಪಾಟೀಲ, ಸಂಗಪ್ಪ ಮಂಟೆ ದಂಪತಿ ಹಾಗೂ ಕಿಶೋರಚಂದ ಜೈನ್ ಅವರಿಗೆ "ಬನಶ್ರೀ ಪ್ರಶಸ್ತಿ" ನೀಡಿ ಸತ್ಕರಿಸಲಾಯಿತು.

ರುಕ್ಮಾಪುರ ಹಿರೇಮಠದ ಗುರುಶಾಂತಮೂರ್ತಿ ಶಿವಾಚಾರ್ಯರು, ಲಕ್ಷ್ಮೀಪುರ ಶ್ರೀಗಿರಿ ಸಂಸ್ಥಾನ ಮಠದ ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ವಿವಿಧ ಮಠಗಳ ಮಹಾಸ್ವಾಮೀಜಿಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು.


ಕೆವೈಡಿಸಿಸಿ ಬ್ಯಾಂಕ್ ನಿರ್ದೇಶಕ ಸುರೇಶ ಸಜ್ಜನ್, ಉದ್ಯಮಿ ಗ್ಯಾನಚಂದ ಜೈನ್, ರಾಯಚಂದ ಜೈನ್, ರಾಜಾ ಸುಶಾಂತ ನಾಯಕ, ಮಲ್ಲಣ್ಣ ಸಾಹುಕಾರ ಮುಧೋಳ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ನಿರೂಪಿಸಿ ವಂದಿಸಿದರು. ಡಾ.ಎಸ್.ಎಮ್.ಭಕ್ತ ಕುಂಬಾರ.

> "ಈ ದೇವಸ್ಥಾನದ ಕಾರ್ಯಕ್ರಮಗಳು ಭಕ್ತಿ ಮತ್ತು ಶ್ರದ್ಧೆಯಿಂದ ಯಶಸ್ವಿಯಾಗಿ ನೆರವೇರಿವೆ. ರುಕ್ಮಾಪುರ ಗ್ರಾಮದ ಧಾರ್ಮಿಕ ಇತಿಹಾಸದಲ್ಲಿ ಇದು ಸುವರ್ಣಾಕ್ಷರಗಳಲ್ಲಿ ದಾಖಲೆಯಾಗುವ ಸಮಾರಂಭ."
>
> –ಡಾ. ಚನ್ನಸಿದ್ಧರಾಮ ಶಿವಾಚಾರ್ಯರು

### ಭಾರತ ದೇಶದ ಜೀವಾಳ

ದೇವಾಲಯಗಳು ಭಾರತ ದೇಶದ ಜೀವಾಳವಾಗಿದ್ದು, ಪ್ರತಿಯೊಂದು ಊರಲ್ಲಿಯೂ ದೇವಸ್ಥಾನಗಳಿರುವುದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯ. ಧರ್ಮ ಮತ್ತು ದೇವರನ್ನು ಗೌರವಿಸುವುದು ಭಾರತೀಯರ ಪರಂಪರೆಯ ಭಾಗವಾಗಿದೆ ಎಂದು ಜಗದ್ಗುರುಗಳು ಹೇಳಿದರು.




ಸಂಪಾದಕರು: ಕ್ಷೀರಲಿಂಗಯ್ಯ ಹಿರೇಮಠ ಬೋನ್ಹಾಳ
ಕನ್ನಡ ದಿನಪತ್ರಿಕೆ
ಆರಾಧ್ಯ ವಾಣಿ
ARADHYAVANI
ಸತ್ಯ, ನಿಷ್ಠೆ, ವಿಶ್ವಾಸದ ಪ್ರತೀಕ...




ಸಂಪಾದಕರು: ಕ್ಷೀರಲಿಂಗಯ್ಯ ಹಿರೇಮಠ ಬೋನ್ಹಾಳ
ಕನ್ನಡ ದಿನಪತ್ರಿಕೆ
ಆರಾಧ್ಯ ವಾಣಿ
ARADHYAVANI
ಸತ್ಯ, ನಿಷ್ಠೆ, ವಿಶ್ವಾಸದ ಪ್ರತೀಕ...



# ಬಸವಣ್ಣ ಮತ್ತು ಸಮ ಸಮಾಜದ ಕನಸು – ಇಂದಿನ ಸಮಾಜಕ್ಕೆ ಮಾರ್ಗದರ್ಶಕ ತತ್ವಗಳು

## ಕಾಯಕ, ದಾಸೋಹ ಮತ್ತು ಸಮಾನತೆಯ ಸಂದೇಶವೇ ಶಾಶ್ವತ ದಾರಿದೀಪ

ಸುರಪುರ: ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಮಾನವೀಯ ಮೌಲ್ಯಗಳನ್ನು ಸ್ಥಾಪಿಸಲು ಮಹತ್ವದ ಪಾತ್ರವಹಿಸಿದ ಮಹಾನ್ ಸಮಾಜ ಸುಧಾರಕ ಬಸವಣ್ಣರ ತತ್ವಗಳು ಇಂದಿನ ಕಾಲಘಟ್ಟದಲ್ಲಿಯೂ ಅತ್ಯಂತ ಪ್ರಸ್ತುತವಾಗಿವೆ ಎಂದು ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಡಾ. ಸುರೇಶ ಆರ್. ಸಜ್ಜನ್ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, 12ನೇ ಶತಮಾನದಲ್ಲಿ ಬಸವಣ್ಣರು ಪ್ರಾರಂಭಿಸಿದ ಚಳವಳಿ ಕೇವಲ ಧಾರ್ಮಿಕ ಪರಿವರ್ತನೆಗೆ ಸೀಮಿತವಾಗಿರದೆ, ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಕ್ರಾಂತಿಗೆ ಕಾರಣವಾಯಿತು. ಆ ಕಾಲದಲ್ಲಿ ಜಾತಿ, ವರ್ಣ, ಲಿಂಗ ಆಧಾ–ರಿತ ಅನ್ಯಾಯಗಳು ಹೆಚ್ಚಾಗಿದ್ದಾಗ, ಬಸವಣ್ಣರು ಅದಕ್ಕೆ ವಿರೋಧವಾಗಿ ಧೈರ್ಯವಾಗಿ ನಿಂತು "ಮಾನವನೇ ಮಿಗಿಲು" ಎಂಬ ಮಹತ್ವದ ಸಂದೇಶವನ್ನು ಸಮಾಜಕ್ಕೆ ನೀಡಿದರು ಎಂದು ಹೇಳಿದರು.

ಬಸವಣ್ಣರು ಪ್ರತಿಪಾದಿಸಿದ "ಕಾಯಕವೇ ಕೈಲಾಸ" ಎಂಬ ತತ್ವವು ಕೆಲಸದ ಗೌರವವನ್ನು ಸಾರುತ್ತದೆ. ಯಾವ ಕೆಲಸವೂ ಹೀನವಲ್ಲ, ಶ್ರಮವೇ ಜೀವನದ ಆಧಾರ ಎಂಬ ನಿಲುವು ಇಂದಿನ ಯುವಜನತೆಗೆ ಪ್ರೇರಣೆಯಾಗಿದೆ. ಪ್ರತಿಯೊಬ್ಬರೂ ತಮ್ಮ ಶ್ರಮದಿಂದ ಬದುಕಬೇಕು ಮತ್ತು ಸ್ವಾಭಿಮಾನದಿಂದ ಜೀವನ ನಡೆಸಬೇಕು ಎಂಬ ಸಂದೇಶವನ್ನು ಅವರು ನೀಡಿದರು ಎಂದು ವಿವರಿಸಿದರು.

ಇದರ ಜೊತೆಗೆ "ದಾಸೋಹ" ತತ್ವವು ಸಮಾಜದಲ್ಲಿ ಹಂಚಿಕೊಳ್ಳುವ ಮನೋಭಾವವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದೆ. ಸ್ವಂತ ಸಂಪತ್ತನ್ನು ಮಾತ್ರ ಸಂಗ್ರಹಿಸಿಕೊಳ್ಳದೆ, ಅದನ್ನು ಸಮಾಜದ ಹಿತಕ್ಕಾಗಿ ಬಳಕೆ ಮಾಡುವ




ಮನೋಭಾವವನ್ನು ಬಸವಣ್ಣರು ಬೋಧಿಸಿದರು. ಇದು ಸಮಾನತೆ ಮತ್ತು ಸಹಕಾರದ ಸಮಾಜ ನಿರ್ಮಾಣಕ್ಕೆ ಅಗತ್ಯವಾದ ಅಂಶವಾಗಿದೆ ಎಂದು ಹೇಳಿದರು.

ಬಸವಣ್ಣರು ಸ್ಥಾಪಿಸಿದ ಅನುಭವ ಮಂಟಪವು ವಿಶ್ವದ ಮೊದಲ ಪ್ರಜಾಪ್ರಭುತ್ವ ವೇದಿಕೆ ಎಂದು ಪರಿಗಣಿಸಲಾಗುತ್ತದೆ. ಇಲ್ಲಿ ಎಲ್ಲ ವರ್ಗದ ಜನರು – ಶರಣರು, ಶರಣೆಯರು, ಸಾಮಾನ್ಯ ಜನರು – ತಮ್ಮ ಆಲೋಚನೆಗಳನ್ನು ಮುಕ್ತವಾಗಿ ಹಂಚಿಕೊಳ್ಳುವ ಅವಕಾಶ ಹೊಂದಿದ್ದರು. ಇದು ಸಮಾನತೆಯ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯದ ಉತ್ತಮ ಉದಾಹರಣೆಯಾಗಿದೆ ಎಂದರು.

ಸ್ತ್ರೀಯರಿಗೂ ಸಮಾನ ಹಕ್ಕುಗಳನ್ನು ನೀಡಿದ ಬಸವಣ್ಣರು ಅಕ್ಕ ಮಹಾದೇವಿ ಸೇರಿದಂತೆ ಅನೇಕ ಶರಣೆಯರನ್ನು ಗೌರವದ ಸ್ಥಾನದಲ್ಲಿ ನಿಲ್ಲಿಸಿದರು. ಮಹಿಳೆಯರಿಗೂ ಆತ್ಮಗೌರವ ಮತ್ತು ಅಭಿವ್ಯಕ್ತಿಯ ಹಕ್ಕು ನೀಡಿದುದು ಅವರ ವಿಶಾಲ ಮನೋಭಾವವನ್ನು ತೋರಿಸುತ್ತದೆ ಎಂದು ಹೇಳಿದರು.

ಇಂದಿನ ಸಮಾಜದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅಭಿವೃದ್ಧಿ ಕಂಡರೂ ಸಹ, ಅಸಮಾನತೆ, ಅನ್ಯಾಯ, ಅಂಧಶ್ರದ್ಧೆಗಳು ಇನ್ನೂ ಸಂಪೂರ್ಣವಾಗಿ ದೂರವಾಗಿಲ್ಲ. ಇಂತಹ ಸಂದರ್ಭದಲ್ಲಿ ಬಸವಣ್ಣರ ತತ್ವಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಸಮ ಸಮಾಜದ ಕನಸು ನನಸಾಗಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಸಮಾಜದಲ್ಲಿ ಸೌಹಾರ್ದತೆ, ಸಹಬಾಳ್ವೆ ಮತ್ತು ಪರಸ್ಪರ ಗೌರವ ಬೆಳೆಸಲು ಬಸವಣ್ಣರ ಚಿಂತನೆಗಳು ದಾರಿದೀಪವಾಗಿವೆ. ಯುವ ಪೀಳಿಗೆ ಈ ತತ್ವಗಳನ್ನು ಅಳವಡಿಸಿಕೊಂಡು ನ್ಯಾಯಸಮ್ಮತ, ಸಮಾನತೆಯ ಮತ್ತು ಶಾಂತಿಯುತ ಸಮಾಜ ನಿರ್ಮಾಣಕ್ಕೆ ಮುಂದಾಗೋಣ.



– ಡಾ.ಸುರೇಶ್ ಆರ್.ಸಜ್ಜನ್
ನಿರ್ದೇಶಕರು, ಡಿಸಿಸಿ ಬ್ಯಾಂಕ್ ಕಲಬುರಗಿ–ಯಾದಗಿರಿ ಹಾಗೂ ಅಧ್ಯಕ್ಷರು ತಾಲೂಕಾ ವೀರಶೈವ ಲಿಂಗಾಯತ ಸಮಿತಿ, ಸುರಪುರ

# ಮಹಿಳಾ ಮೀಸಲಾತಿ ವಿರೋಧ: ಕಾಂಗ್ರೆಸ್ ದ್ವಂದ್ವ ನೀತಿ ಖಂಡನೆ ; ನಾಗರತ್ನ ಕುಪ್ಪಿ ಟೀಕೆ

ಆರಾಧ್ಯ ವಾಣಿ



ಯಾದಗಿರಿ : ಮಹಿಳಾ ಮೀಸಲಾತಿ ಕಾಯ್ದೆಯನ್ನು ವಿರೋಧಿಸಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳ ವಿರುದ್ಧ ನಾಗರತ್ನ ಕುಪ್ಪಿ ಟೀಕಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಮಹಿಳೆಯರ ಪರ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷವು ಮಹಿಳಾ ಮೀಸಲಾತಿ ವಿಷಯದಲ್ಲಿ ವಿರೋಧ ವ್ಯಕ್ತಪಡಿಸುವ ಮೂಲಕ ತನ್ನ ದ್ವಂದ್ವ ನೀತಿಯನ್ನು ತೋರಿ ಸಿದೆ ಎಂದು ಆರೋಪಿಸಿದರು. ದೇಶದ ಮಹಿಳೆಯರಿಗೆ ಇದು ಸ್ಪಷ್ಟ ಸಂದೇಶವಾಗಿದ್ದು, ಕಾಂಗ್ರೆಸ್‌ನ ಮಹಿಳಾ ಸಂಸದರು ಸಹ ಇದನ್ನು ವಿರೋಧಿಸಿರುವುದು ಆಶ್ಚರ್ಯಕರ ಸಂಗತಿ ಎಂದು ಹೇಳಿದರು.

ಹಾಗೆಯೇ ಇತಿಹಾಸವನ್ನು ಉಲ್ಲೇಖಿಸಿದ ಅವರು, 12ನೇ ಶತಮಾನದಲ್ಲೇ ಬಸವಣ್ಣ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಒತ್ತಿ ಹೇಳಿದ್ದಾರೆ. ಆದರೆ ಇಂದಿನ ಕಾಲದಲ್ಲಿ ಮಹಿಳಾ ಮೀಸಲಾತಿಗೆ ವಿರೋಧ ವ್ಯಕ್ತವಾಗುತ್ತಿರುವುದು ವಿಷಾದನೀಯ ಬೆಳವಣಿಗೆ ಎಂದು ಅಭಿಪ್ರಾಯಪಟ್ಟರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಮಹಿಳಾ ಸಬಲೀಕರಣದ ದೃಷ್ಟಿಯಿಂದ ಮಹಿಳಾ ಮೀಸಲಾತಿ ಕಾಯ್ದೆಯನ್ನು ಸಂಸತ್ತಿನಲ್ಲಿ ಮಂಡಿಸಿರುವುದನ್ನು ಅವರು ಶ್ಲಾಘಿಸಿದರು. ಆದರೆ ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳ ವಿರೋಧದಿಂದ ಮಹಿಳೆಯರ ನಿರೀಕ್ಷೆಗೆ ಧಕ್ಕೆಯಾಗಿದೆ ಎಂದು ಹೇಳಿದರು.


ಮಹಿಳೆಯರು ತಮ್ಮ ಸಾಮರ್ಥ್ಯದಿಂದಲೇ ರಾಜ–ಕೀಯದಲ್ಲಿ ಮುನ್ನಡೆ ಸಾಧಿಸಲು ಅರ್ಹರು. ಮಹಿಳಾ ಮೀಸಲಾತಿ ಕಾಯ್ದೆ ಜಾರಿಯಾದರೆ ಅನೇಕ ಮಹಿಳೆಯ–ರಿಗೆ ಅವಕಾಶ ಸಿಗುತ್ತಿತ್ತು ಎಂದು ಹೇಳಿದರು.

ಇದೇ ವೇಳೆ, ಕೇವಲ ರಾಜಕೀಯ ಮನೆತನಗಳ ಮಹಿಳೆಯರಿಗಷ್ಟೇ ಅವಕಾಶ ಸೀಮಿತವಾಗಬಾರದು. ಗ್ರಾಮೀಣ ಭಾಗದಲ್ಲಿ, ಸಾಮಾನ್ಯ ಕುಟುಂಬಗಳಲ್ಲಿ ಇರುವ ಪ್ರತಿಭಾವಂತ ಮಹಿಳೆಯರೂ ಶಾಸನಸಭೆ ಮತ್ತು ಲೋಕಸಭೆಯಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಅವಕಾಶ ಪಡೆಯಬೇಕು ಎಂದು ಅಭಿಪ್ರಾಯಪಟ್ಟರು.

ಮಹಿಳಾ ಮೀಸಲಾತಿ ಜಾರಿಗೆ ಬರುತ್ತದೆ ಎಂಬ ನಿರೀಕ್ಷೆಯಲ್ಲಿ ದೇಶದ ಮಹಿಳೆಯರು ಅಪಾರ ಸಂತೋಷ ವ್ಯಕ್ತಪಡಿಸಿದ್ದರು. ಆದರೆ ಕಾಂಗ್ರೆಸ್‌ನ ವಿರೋಧದಿಂದ ಆ ಆಶೆಗಳು ಭಂಗಗೊಂಡಿವೆ. ಇದನ್ನು ದೇಶದ ಮಹಿಳೆಯರು ಕ್ಷಮಿಸುವುದಿಲ್ಲ ಎಂದು ಅವರು ಎಚ್ಚರಿಸಿದರು.

ಈ ಹಿನ್ನೆಲೆಯಲ್ಲಿ ಮಹಿಳೆಯರಲ್ಲಿ ಜಾಗೃತಿ ಮೂಡಿಸಿ, ಕಾಂಗ್ರೆಸ್‌ನ ನಿಲುವಿನ ವಿರುದ್ಧ ಹೋರಾಟಗಳನ್ನು ಹಮ್ಮಿಕೊಳ್ಳಲಾಗುವುದು. ಜೊತೆಗೆ, ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೆ ತರುವ ದಿಸೆಯಲ್ಲಿ ಕೇಂದ್ರ ಸರ್ಕಾರ ಮುಂದಿನ ದಿನಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

# ಮಸ್ಕಿ, ಕೃಷಿ ಮಾರುಕಟ್ಟೆಗೆ ಸಚಿವ ಶಿವಾನಂದ ಎಸ್.ಪಾಟೀಲ್ ಭೇಟಿ



ಮಸ್ಕಿ : ಪಟ್ಟಣದ ಎ.ಪಿ.ಎಂ.ಸಿ ಯು ಸ್ವತಂತ್ರ ಮಾರುಕಟ್ಟೆಯಾಗಿ ಅಸ್ತಿತ್ವಕ್ಕೆ ಬಂದ ಹಿನ್ನೆಲೆಯಲ್ಲಿ ಮಸ್ಕಿ ಎ.ಪಿ.ಎಂ.ಸಿಗೆ ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ್ ಅವರು ಶನಿವಾರ ಭೇಟಿ ನೀಡಿದರು. ಈ ವೇಳೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ್ ಅವರು ಮಾತನಾಡಿ ಮಸ್ಕಿ ಕೃಷಿ ಉತ್ಪನ್ನ ಮಾರುಕಟ್ಟೆಯಾಗಿ ಒಂದು ವರ್ಷವಾದರೂ ಕೂಡ ಹೊಸ ಕಟ್ಟಡ ಏಕೆ ನಿರ್ಮಾಣ ಮಾಡಿಲ್ಲ.ಮಸ್ಕಿ ಮತ್ತು ಸರ್ಕಾರದಿಂದ 2.5 ಕೋಟಿ ಅನುದಾನ ನೀಡಿದ್ದು,ಅದನ್ನು ಯಾವ ರೀತಿ ಬಳಕೆ ಮಾಡಿಕೊಂಡಿದ್ದೀರಿ ಎಂಬುದನ್ನು ತಿಳಿಸಿ,ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ವರ್ತಕರು ಇಲ್ಲದೇ ಇರುವುದರ ಬಗ್ಗೆ ದೂರುಗಳು ಬಂದಿದ್ದು,ವರ್ತಕರು ಇರುವ ಸ್ಥಳಗಳಿಗೆ ನೀವೆ ಹೋಗಿ ಭೇಟಿ ನೀಡುವುದು ಎಷ್ಟು ಸರಿ ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಮೊದಲು ಕೃಷಿ ಉತ್ಪನ್ನ ಮಾರುಕಟ್ಟೆಗೆ ಎರಡು ಗೇಟ ಗಳನ್ನು ನಿರ್ಮಾಣ ಮಾಡಿ ಎ.ಪಿ.ಎಂ.ಸಿ ಅಭಿವೃದ್ಧಿಗಾಗಿ ಎಂಟ–ರಿಂದ ಹತ್ತು ಕೋಟಿ ಅನುದಾನವನ್ನು ಒದಗಿಸುತ್ತೇನೆ ಎಂದು ಹೇಳಿದರು.


ಕೃಷಿ ಮಾರುಕಟ್ಟೆಯ ನೂತನ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಸಮಸ್ಯೆಗಳನ್ನು ಆಲಿಸಿ ಅವರಿಗೆ ಸೂಕ್ತ ಪರಿಹಾರ ನೀಡುವ ಭರವಸೆ ನೀಡಿದರು.ನಂತರ ಮಸ್ಕಿ ಕೃಷಿ ಉತ್ಪನ್ನ ಮಾರುಕಟ್ಟೆ ವತಿಯಿಂದ ಸಚಿವರಿಗೆ ಸನ್ಮಾನ ಮಾಡಲಾಯಿತು. ಈ ವೇಳೆ ಕೃಷಿ ಸಚಿವರಿಗೆ ಶಾಸಕ ಬಸನಗೌಡ ತುರವಿಹಾಳ ಅವರು ಸಾಥ್ ನೀಡಿದರು.


ಮಸ್ಕಿ ಎಪಿಎಂಸಿಯಲ್ಲಿ ಚೆಕ್ ಪೋಸ್ಟ್ ನಿರ್ಮಾಣ ಮಾಡಬೇಕು ಹಾಗೂ ವರ್ತಕರ ಸಮಸ್ಯೆಗಳಿಗೆ ಪರಿಹಾರ ಒದಗಿಸಬೇಕೆಂದು ವರ್ತಕ ಪ್ರತಿನಿಧಿ ಸಂಗಣ್ಣ ಎಲಿಗಾರ ಹಾಗೂ ಎ.ಪಿ.ಎಂ.ಸಿ.ಪ್ರತಿನಿಧಿ ಮಲ್ಲರೆಡ್ಡೆಪ್ಪ ಅವರು ಕೃಷಿ ಸಚಿವರಿಗೆ ಮನವಿ ಮಾಡಿದರು.

ಈ ವೇಳೆ ವಿವಿಧ ಇಲಾಖೆಯ ಅಧಿಕಾರಿಗಳು, ವರ್ತಕರು, ಕಾಂಗ್ರೆಸ್ ಪಕ್ಷದ ಮುಖಂಡರು ಸೇರಿದಂತೆ ಇತರರು ಉಪಸ್ಥಿತರಿದ್ದರು.















# ಶ್ರೀ ಶೈಲ ಜಗದ್ಗುರುಗಳಿಂದ ಶ್ರೀ ಅಮರೇಶ್ವರ ಗುರು 21 ಪುಣ್ಯಸ್ಮರಣೆ ಹಾಗೂ ಗುರು ಪಟ್ಟಾಧಿಕಾರ ಮಹೋತ್ಸವದ ಪೋಸ್ಟರ್ ಬಿಡುಗಡೆ

ಆರಾಧ್ಯ ವಾಣಿ

ದೇವರಭೂಪೂರ: ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಅವರು ಅಮರೇಶ್ವರ ಗುರುಗಳ 21ನೇ ವರ್ಷದ ಪುಣ್ಯ ಸ್ಮರಣೋತ್ಸವ ಹಾಗೂ ಶ್ರೀ ಷ.ಬ್ರ. ಅಭಿನವ ಗಜದಂಡ ಶಿವಾಚಾರ್ಯರ 21ನೇ ಗುರುಪಟ್ಟಾಧಿಕಾರ ಮಹೋತ್ಸವದ ಪೋಸ್ಟರ್ ಅನ್ನು ಭಕ್ತರ ಸಮ್ಮುಖದಲ್ಲಿ ಬಿಡುಗಡೆಗೊಳಿಸಿದರು.





ಈ ಸಂದರ್ಭದಲ್ಲಿ ಮಾತನಾಡಿದ ಜಗದ್ಗುರುಗಳು, ಗುರು ಪರಂಪರೆಯ ಮಹತ್ವವನ್ನು ವಿವರಿಸಿ, ಇಂತಹ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಧಾರ್ಮಿಕ ಜಾಗೃತಿ ಮೂಡಿಸುವುದರ ಜೊತೆಗೆ ನೈತಿಕ ಮೌಲ್ಯಗಳನ್ನು ಬಲಪಡಿಸುತ್ತವೆ ಎಂದು ಹೇಳಿದರು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆಯಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಲಕ್ಷ್ಮೀಪುರದ ಶ್ರೀಗಿರಿ ಸಂಸ್ಥಾನದ ಡಾ. ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯ ಹಾಗೂ ರುಕ್ಮಾಪುರ ಹಿರೇಮಠ ಸಂಸ್ಥಾನದ ಗುರು ಶಾಂತಮೂರ್ತಿ ಶಿವಾಚಾರ್ಯ ಸೇರಿದಂತೆ ಇತರ ಪೂಜ್ಯರು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಗೌರವ ತುಂಬಿದರು.

ಜುಲೈ 4ರಿಂದ 24ರವರೆಗೆ ನಡೆಯಲಿರುವ ಈ ಮಹೋತ್ಸವದಲ್ಲಿ ವೇದಾಂತ ಸಮ್ಮೇಳನ, ಧರ್ಮ ಸಂದೇಶ, ಮಹಾರುದ್ರ ಯಜ್ಞ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಜೊತೆಗೆ ರೈತ ಜನಪದೋತ್ಸವ, ಆರೋಗ್ಯ ಶಿಬಿರಗಳು, ಯುವ ಜನೋತ್ಸವ, ಸೈನಿಕರು ಹಾಗೂ ಆದರ್ಶ ನೌಕರರಿಗೆ ಸನ್ಮಾನ ಸೇರಿದಂತೆ ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದೆ.

ಜುಲೈ 23ರಂದು ಲಿಂಗದೀಕ್ಷೆ ಹಾಗೂ ಅಯ್ಯಾಚಾರ ನಡೆಯಲಿದ್ದು, ಜುಲೈ 24ರಂದು ಮಹಾರುದ್ರಯಜ್ಞ ಪೂರ್ಣಾಹುತಿ, ಸದ್ಧರ್ಮ ಸಮಾರಂಭ ಹಾಗೂ ನೂತನ ರಥೋತ್ಸವ ಕಾರ್ಯಕ್ರಮಗಳು ಭವ್ಯವಾಗಿ ನಡೆಯಲಿವೆ.

ಈ ಮಹೋತ್ಸವಕ್ಕೆ ದೇವರಭೂಪೂರ, ಗುರುಗುಂಟಾ, ಗುಂತಗೋಳ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಸಂಸ್ಥಾನ ಬೃಹನ್ಮಠದ ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ.

## ನುಡಿದಂತೆ ನಡೆದ ಸಚಿವ ಪ್ರಿಯಾಂಕ ಖರ್ಗೆ : ಅನಪೂರ

ಆರಾಧ್ಯ ವಾಣಿ



ಯಾದಗಿರಿ : ಗುರಮಿಠಕಲ್ ಮತಕ್ಷೇತ್ರದ ಹತ್ತಿಕುಣಿ ಜಲಾಶಯ ಕಾಲುವೆಗಳ ದುರಸ್ತಿ ಯೋಜನೆಗೆ ವಿಧಾನ ಸಭೆಯಲ್ಲಿ ರಾಜ್ಯ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಅಚರು, ಕ್ಷೇತ್ರದ ಶಾಸಕ ಕಂದಕೂರ ಅವರಿಗೆ ಹಾಗೂ ಜನರಿಗೆ ನೀಡಿದ ಭರವಸೆಯಂತೆ ಅಭಿವೃದ್ಧಿ ಕಾರ್ಯಗಳಿಗೆ ನನ್ನ ಸಹಕಾರ ಬೆಂಬಲ ಸದಾ ಇರುತ್ತದೆ ಎಂದು ತಿಳಿಸಿದ್ದರು ಅದರಂತೆ ರಾಜ್ಯ ಸಚಿವ ಸಂಪುಟದಲ್ಲಿ ನಾಲಾಗಳ ಆಧುನಿಕರಣಕ್ಕೆ 72 ಕೋಟಿ ರೂಪಾಯಿಗಳು ಮಂಜೂರು ಮಾಡಿಸಲು ಕ್ರಮ ಕೈಗೊಳ್ಳುವ ಮೂಲಕ ಖರ್ಗೆ ಅವರು ನುಡಿದಂತೆ ನಡೆದಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸರೆಡ್ಡಿ ಮಾಲಿ ಪಾಟೀಲ್ ಅನಪೂರ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು ಸಚಿವ ಪ್ರಿಯಾಂಕ ಖರ್ಗೆ ಅವರ ತಂದೆಯವರಾದ ಎಐಸಿಸಿ ಅಧ್ಯಕ್ಷರಾದ ಡಾ.ಮಲ್ಲಿಕಾರ್ಜುನ ಖರ್ಗೆ ಅವರು 1972 ರಿಂದ 2008 ರವರೆಗೆ ಗುರಮಿಠಕಲ್ ಕ್ಷೇತ್ರವನ್ನು ಪ್ರತಿನಿಧಿಸುವ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಕ್ಷೇತ್ರಕ್ಕೆ ಹೊಸ ಕಾಯಕಲ್ಪ ನೀಡುವ ಮೂಲಕ ರಾಜ್ಯದ ಗಮನ ಸೆಳೆಯಲು ಕಾರಣಿಭೂತರಾಗಿದ್ದಾರೆ, ಅವರಂತೆ ಅವರು ಪುತ್ರ ಸಚಿವ ಖರ್ಗೆ, ಸಂಸಂದ ರಾಧಾಕೃಷ್ಣ ದೊಡಮನಿ ಅವರು ಕ್ಷೇತ್ರದ ಜನರೊಂದಿಗೆ ನಿರಂತರ ಒಡನಾಟ ಇಟ್ಟುಕೊಂಡು ಅವರ ಸಮಸ್ಯೆಗಳಿಗೆ ಸ್ಪಂದಿಸಿ, ಜನರ ಬೇಡಿಕೆಗೆ ಅನುಗುಣವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದಾರೆ ಎಂದು ತಿಳಿಸಿದ್ದಾರೆ.

ಹತ್ತಿಕುಣಿ ಜಲಾಶಯ ನಾಲಾ ಆದ- ,ನಿಕರಣದಿಂದ ಹತ್ತಿ ಕುಣಿ,ಕಟಕಿ ಶಹಾಪೂರ,ಹೊನಗೇರಾ , ಯಡ್ಡಳ್ಳಿ,ಬಂದಳ್ಳಿ ಮತ್ತು ದಸರಾಬಾದ ಗ್ರಾಮಗಳ ರೈತರು ಸುಮಾರು 5400 ಎಕರೆ ಕೃಷಿ ಭೂಮಿಗೆ ನೀರು ಒದಗಿಸಲು ಅನುಕೂಲ ವಾಗುತ್ತದೆ ಜೊತೆಗೆ ನೀರು ಪೋಲಾಗುವುದನ್ನು ತಡೆಗಟ್ಟಿದಂತಾಗುತ್ತದೆ.ಈ ಯೋಜನೆ ಅನುಷ್ಠಾನಕ್ಕೆ ಬರಲು ರಾಜ್ಯದ ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರಾದ ಡಿ ಕೆ ಶಿವಕುಮಾರ ಅವರು ಸಹಕಾರವು ಇದೆ ಯೋಜನೆ ಪ್ರಾಮಾಣಿಕವಾಗಿ ಅನುಷ್ಠಾನಗೊಂಡು ರೈತಾಪಿ ವರ್ಗಕ್ಕೆ ಅನಕೂಲವಾಗಲಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹತ್ತಿಕುಣಿ ಜಲಾಶಯ ನಾಲೆ ಆಧುನಿಕರಣಕ್ಕೆ 72 ಕೋಟಿ ರೂ.

### ಕೇಂದ್ರ ಸಚಿವ ವಿ.ಸೋಮಣ್ಣ, ಶಾಸಕ ಶರಣಗೌಡ ಕಂದಕೂರರಿಗೆ ರೈತರ ಪರವಾಗಿ ಕೃತಜ್ಞತೆಗಳು : ಸುಭಾಷಚಂದ್ರ ಕಟಕಟೆ

ಆರಾಧ್ಯ ವಾಣಿ



ಯಾದಗಿರಿ : ಗುರುಮಠಕಲ್ ಮತಕ್ಷೇತ್ರದ ಹತ್ತಿಕುಣಿ ಜಲಾಶಯದ ನಾಲೆಗಳ ಆಧುನಿಕರಣಕ್ಕೆ 72 ಕೋಟಿ ರೂ. ಬಿಡುಗಡೆಯಾಗುವಲ್ಲಿ ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆಗಳ ರಾಜ್ಯ ಸಚಿವ ವಿ.ಸೋಮಣ್ಣ ಹಾಗೂ ಗುರುಮಠಕಲ್ ಕ್ಷೇತ್ರದ ಶಾಸಕ ಶರಣಗೌಡ ಕಂದಕೂರ ಅವರ ಪಾತ್ರ ಹಿರಿದಾಗಿದೆ ಎಂದು ಜೆಡಿ-ಎಸ್ ಜಿಲ್ಲಾಧ್ಯಕ್ಷ ಸುಭಾಷಚಂದ್ರ ಕಟಕಟೆ ತಿಳಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಅರ್ಧ ಶತಮಾನದ ಹಿಂದೆ ನಿರ್ಮಿಸಿದ್ದ ಜಲಾಶಯದ ಅನೇಕ ಭಾಗಗಳು ದುರಸ್ತಿ ಬಂದು ಸಾಕಷ್ಟು ನೀರು ಪೋಲಾಗುವ ಮೂಲಕ ರೈತರಿಗೆ ಸಾಕಷ್ಟು ತೊಂದರೆಯಾಗಿತ್ತು. ಇದನ್ನು ಮನಗಂಡ ಶಾಸಕ ಕಂದಕೂರ ಅವರು, ಕೇಂದ್ರ ಸಚಿವ ವಿ.ಸೋಮಣ್ಣ ಅವರ ಗಮನಕ್ಕೆ ಈ ಬಗ್ಗೆ ಸಮಗ್ರ ಮಾಹಿತಿ ನೀಡಿ ಅನುದಾನ ಬಿಡುಗಡೆ ಮಾಡುವ ಮೂಲಕ ಮಹತ್ವದ ಕೆಲಸ ಮಾಡಿಕೊಡಬೇಕೆಂದು ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿದ ಅವರು 72 ಕೋಟಿ ರೂ. ಮಂಜೂರು ಮಾಡಿಸಿದ್ದರು.ನಂತರ ಶಾಸಕರ ರಾಜ್ಯ ಸರ್ಕಾರದ ಜಲಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಅವರಿಗೆ ಸತತ ಭೇಟಿ ಮಾಡಿ ಮತ್ತು ಸದನದಲ್ಲಿ ಗಮನ ಸೆಳೆಯುವ ಮೂಲಕ ಕಾರ್ಯಗತವಾಗುವಂತೆಯೇ ಸಾಕಷ್ಟು ಶ್ರಮಿಸಿದ್ದಾರೆ. ಆ ಕಾರಣಕ್ಕಾಗಿಯೇ ಈಗ ರಾಜ್ಯ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಕಟಕಟೆ ವಿವರಿಸಿದ್ದಾರೆ. ರೈತರ ಬಹುದಿನಗಳ ಬೇಡಿಕೆಗೆ ಈಡೆರುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಕೇಂದ್ರ ಸಚಿವ ವಿ.ಸೋಮಣ್ಣ, ಶಾಸಕ ಶರಣಗೌಡ ಕಂದಕೂರ ಅವರಿಗೆ ಹತ್ತಿಕುಣಿ ಜಲಾಶಯ ವ್ಯಾಪ್ತಿಯ ರೈತರ ಪರವಾಗಿ ಕೃತಜ್ಞತೆಗಳು ಸಲ್ಲಿಸುವುದಾಗಿ ಅವರು ಹೇಳಿದ್ದಾರೆ.






ಕನ್ನಡ ದಿನಪತ್ರಿಕೆ
ಆರಾಧ್ಯ ವಾಣಿ
ARADHYAVANI
ಸತ್ಯ, ನಿಷ್ಠೆ, ವಿಶ್ವಾಸದ ಪ್ರತೀಕ...

ವತಿಯಿಂದ





ವಿಶ್ವಗುರು, ಜಗತ್ತಿನ ಮೊದಲ ಸಮಾನತೆಯ
ಹರಿಕಾರ, ಭಕ್ತಿ ಭಂಡಾರಿ, ವಚನ ಕ್ರಾಂತಿಯ
ರೂವಾರಿ, ಕಾಯಕ–ದಾಸೋಹ ಸಂಸ್ಕೃತಿಯನ್ನು
ಜೀವನದಲ್ಲಿ ಅನ್ವಯಿಸಿದ ಮಹಾನ್ ನಾಯಕರು,
ಜಗತ್ತಿನ ಪ್ರಥಮ ಪಾರ್ಲಿಮೆಂಟ್ ಎನ್ನಲಾದ ಅನುಭವ
ಮಂಟಪದ ಸಂಸ್ಥಾಪಕರು, ಜಗಜ್ಯೋತಿ

## ಶ್ರೀ ಬಸವೇಶ್ವರರ
## ಜಯಂತ್ಯೋತ್ಸವ ಹಾಗೂ
## ಅಕ್ಷಯ ತೃತೀಯ
## ಹಾರ್ದಿಕ ಶುಭಾಶಯಗಳು.

ಸಮಾನತೆ, ಸತ್ಯ ಮತ್ತು ಸೇವೆಯ ಬಸವ ತತ್ವಗಳು
ನಮ್ಮ ಜೀವನದಲ್ಲಿ ಸದಾ ಬೆಳಗಲಿ ಎಂದು ಹಾರೈಸುತ್ತೇವೆ.

-ಆರಾಧ್ಯ ವಾಣಿ ಪತ್ರಿಕಾ ಬಳಗ

ARADHYA VANI OWNER, EDITOR, PUBLISHER AND PRINTER- KSHEERALINGAYYA HIREMATH, PRINTED AT TRIRATNA PRINTERS OFFSET PRINTING PRESS, SHREE GURU COMPLEX, SHOP NO3, OPPOSITE S P OFFICE, YADGIR, KARNATAKA-585 202. aradhyavani52@gmail.com